ಕುಮಾರಿ ಎಸ್. ಪ್ರಮಿಳಾ.—ಈಗ ನೀವು ಅವರನ್ನು ಅಲ್ಲಿಂದ ಕಳುಹಿಸುವುದಾದರೆ ಅವರಿಗೆ ಪರಿಹಾರವನ್ನು ಕೊಡಬೇಕಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಅವರಿಗೆ ಪರಿಹಾರವನ್ನು ಕೊಡತಕ್ಕ ಪ್ರಶ್ನೆ ಬರುವುದು ಅವರ ಜಮೀನನ್ನು ಕಾರ್ಪೊರೇಷನ್‌ನವರು ವಶಪಡಿಸಿಕೊಂಡಾಗ ಮಾತ್ರ. ಆದರೆ ಇಲ್ಲಿ ಅವರಿಗೆ ಪರಿಹಾರವನ್ನು ಕೊಡತಕ್ಕ ಪ್ರಶ್ನೆಯೆ ಬರುವುದಿಲ್ಲ. ಇದು ಕೇವಲ ಮಾನವೀಯತೆಯ ಪ್ರಶ್ನೆ. ಆದುದರಿಂದಲೇ ಅವರಿಗೆ ಬೇರೆ ಕಡೆ ಜಾಗವನ್ನು ಕೊಡುತ್ತಿದ್ದೇವೆ.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—ಈ ಗುಡಿಸಲು ನಿವಾಸಿಗಳಿಗೆ ಬೇರೆ ಕಡೆ ಎಲ್ಲ ಸೌಲಭ್ಯಗಳನ್ನು ಕೊಡುವವರೆಗೂ ಪಾಯುದಳದವರು ಗೋಡೆ ಕಟ್ಟುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ಹೇಳಬಯಸುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಈ ವಿಚಾರ ಕೋರ್ಟಿನಲ್ಲಿರುವುದರಿಂದ ನಾವು ಪ್ರಸ್ತಾಪ ಮಾಡಿದರೆ ಅದು ಸಬ್‌ಜುಡಿಸ್ ಆಗುತ್ತದೆ.

(iii) re: Lorry Accident at Bhalki on 22nd February 1980.

SRI D. DEVARAJ URS (Hunsur).—Sir, I call the attention of the Chief Minister to the Lorry accident that took place at Bhalki on 22nd February 1980.

SRI R. GUNDU RAO (Chief Minister).—Sir, I wish to make the following statement.

There was no stampede at the rally and no persons were killed or injured since pucca police bandobust was maintained throughout. Unfortunately, however, 2 lorry accidents took place while carrying people to the Kissan rally. The details are as follows :

(i) Janawada Police Station Crime No.21/80 under Section 279, 338 and 304 (A) IPC. Owner of the lorry is Sri Ramangowda, Contractor and the registration number is AAK 2557, Names of deceased (i) Mahatab Sab, S/o Ghundesab, Age : 60 years, R/o Mannalli, Occupation; Cooli, (2) Basappa, S/o Shivappa, Age: 60 years, R/o Mannalli, Occupation: Cooli (3) Thirtyseven persons were injured. Two deaths have taken place.

The accident took place as a result of rash and negligent driving on the part of the driver who was attempting to overtake another vehicle. Ten of the persons injured have received grievious injuries and the rest only simple injuries. All the persons injured were treated as inpatients at the District Hospital, Bidar. The accident took place at 12.30 hours on 21st February 1980 within the limits of Janawada Police Station. The lorry involved was carrying 60 persons and was going from Mannalli to Bhalki.

(ii) The second accident took place in respect of a lorry coming from Khatakchinoohalli to Bhalki and was carrying 80 people. This accident took place at 15.00 hours on 21st February 1980 On account of the axle breaking the lorry owner is one Sri Veershetty

S/o Bhimshya, aged 40 years, and he is a driver cum owner of the lorry No. MYI 3246. He is a resident of Dhubalgundi. 17 persons were injured, 5 of whom received grievious injuries and the rest simple injuries. All the injured persons were treated as inpatients at the District Hospital, Bidar.

Ex-gratia compensation of Rs. 20,000 had been sent to the Deputy Commissioner's Office, Bidar, for distribution to the families of the deceased at the rate of Rs.2,000 at Rs.500 per person suffering from grievious injuries and at Rs.250 per persons suffering from minor injuries.

In both the cases, the lorries were used in violation of the Motor Vehicles Act and Rules and cases have been booked against the drivers. In respect of the case against the driver of MYI 3246, the police are yet to arrest him as he is undergoing treatment. Shri Babumya who was driving vehicle No. AAK 2557 is arrested.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು). ಸ್ವಾಮಿ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಹೇಳಿಕೆಯ ಪ್ರಕಾರ ಇಬ್ಬರು ಸತ್ತಿದ್ದಾರೆಂದೂ ಕೆಲವರು ಗಾಯಗೊಂಡಿದ್ದಾರೆಂದೂ ಇದೆ. ನಾನು ಈ ಸಂದರ್ಭದಲ್ಲಿ ಆಸ್ಪತ್ರೆಗೆ ಹೋಗಿ ನೋಡಿದಾಗ ಸುಮಾರು ೫೭ ಜನರು ಅಡ್ಮಿಟ್ ಆಗಿದ್ದರು. ಇವರಲ್ಲಿ ಇಬ್ಬರು ಸತ್ತಿದ್ದು, ಒಬ್ಬರನ್ನು ಹೈದರಾಬಾದ್ ಆಸ್ಪತ್ರೆಗೆ ಕಳುಹಿಸಲಾಗಿತ್ತು. ಏತಕ್ಕೆಂದರೆ ಅವರ ತಲೆಗೆ ತುಂಬಾ ಪೆಟ್ಟು ಬಿದ್ದು ನಾರ್ಮಲ್ ಪಂಕ್ಷನ್ ಆಫ್ ದಿ ಬ್ರೈನ್ ಆಗುವುದಕ್ಕೆ ಸಾಧ್ಯವಿಲ್ಲ. ಹುಚ್ಚು ಹಿಡಿದ ಹಾಗೆ ಆಡುತ್ತಾರೆಂದು ಕಳುಹಿಸಿಕೊಟ್ಟಿದ್ದರು. ಈವಾಗ ಹೇಗಿರುತ್ತಾರೋ ಗೊತ್ತಿಲ್ಲ. ಆ ಮೇಲೆ ಅಲ್ಲಿದ್ದವರಲ್ಲಿ ಇಂಜೂರ್ ಪರ್ಸನ್ಸ್‌ನಲ್ಲಿ ಕಾಲು ಮರಿದುಕೊಂಡಿದ್ದವರು ೬ ಜನರು. ಲಿಂಬ್ಸ್ ಮುರಿದು ಕೊಂಡಿದ್ದವರು ೩ ಜನರು ಒಟ್ಟು ೧೫ ಜನರು ಗಾಯಾಳುಗಳು ಅಲ್ಲಿದ್ದರು ಬೇರೆಯವರಿಗೆ ಸಣ್ಣಪುಟ್ಟ ಗಾಯಗಳಾಗಿ ಆಸ್ಪತ್ರೆಯಿಂದ ಚಿಕಿತ್ಸೆಯನ್ನು ಪಡೆದುಕೊಂಡು ಹೋಗಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ೨೦ ಸಾವಿರ ರೂಪಾಯಿಗಳನ್ನು ಕಳುಹಿಸಿಕೊಟ್ಟಿದ್ದಾರೆಂದು ಹೇಳಿದ್ದಾರೆ. ಬಹುಶಃ ಅದು ಇಷ್ಟು ಹೊತ್ತಿಗೆಲ್ಲ ಹಂಚಿಕೆಯಾಗಿರಬಹುದು. ಸರ್ಕಾರದವರಂ ಈ ಸಂದರ್ಭದಲ್ಲಿ ಸಹಾಯ ಮಾಡತಕ್ಕಂಥ ಸರಿಯಾದುದಾಗಿರುತ್ತದೆ, ಆದರೆ ಲಾರಿಗಳ ಮಾಲೀಕರು ಕಂಟ್ರಾಕ್ಟರ್ಸ್ ಎಂದು ಹೆಸರು ಕೊಟ್ಟಿದ್ದಾರೆ. ಈವತ್ತಿನ ದಿವಸ ನನಗೆ ಗೊತ್ತಿರುವ ಪ್ರಕಾರ ಕಾರಂಜಿ ಪ್ರಾಜೆಕ್ಟ್‌ನ ಕೆಲವು ಪಿಡಬ್ಲ್ಯೂಡಿ ಲಾರಿಗಳನ್ನು ಉಪಯೋಗಿಸಿಕೊಂಡಿದ್ದು. ಅವುಗಳಲ್ಲಿ ಎರಡು ಲಾರಿಗಳು ಆಕ್ಸಿಡೆಂಟ್‌ಗೆ ಒಳಗಾಗಿರುತ್ತವೆ. ಮಾನ್ಯ ಮುಖ್ಯಮಂತ್ರಿಗಳು ಈ ಆಕ್ಸಿಡೆಂಟ್‌ಗೆ ಇನ್‌ವಾಲ್ವ್ ಆಗಿರ ತಕ್ಕಂಥವು ಪ್ರೈವೇಟ್ ಕಂಟ್ರಾಕ್ಟರ್ಸ್‌ಗೆ ಸೇರಿದ್ದು ಎಂದು ಹೇಳಿದ್ದಾರೆ. ಇದು ಸರಿಯಲ್ಲ. ಕಾರಂಜಿಗೆ ಪ್ರಾಜೆಕ್ಟ್‌ಗೆ ಸೇರಿದಂಥ ಈ ಎರಡೂ ಲಾರಿಗಳಲ್ಲಿ ಜನರನ್ನು ಸಾಗಿಸುವುದಕ್ಕಾಗಿ ಉಪಯೋಗ ಮಾಡಿದ್ದಾರೆ. ಈ ರೀತಿ ಜನರನ್ನು ಸಾಗಿಸುವುದಕ್ಕೆ ಲೈಸೆನ್ಸ್ ಇಲ್ಲ. ಲಾರಿಗಳಲ್ಲಿ ಜನರನ್ನು ತುಂಬಿಕೊಂಡು ಹೋಗುವುದು ಕಾನೂನಿಗೆ ವಿರುದ್ಧವಾಗುತ್ತದೆ' ಆದ್ದರಿಂದ ಕೇಸನ್ನೂ ಕೂಡ ಹಾಕಿದ್ದಾರೆ. ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಯಾರು ಲಾರಿಗಳನ್ನು ಉಪಯೋಗ ಮಾಡಿ ಜನರನ್ನು ತುಂಬಿಕೊಂಡು ಹೋಗುವುದಕ್ಕೆ ಆಣಿ ಮಾಡಿದರೋ ಅವರೇ ಈ ಡ್ಯಾಮೇಜ್‌ಗೆ ಕಾರಣರಾಗಿರುತ್ತಾರೆ. ಅವರೇ ಈ ನಷ್ಟವನ್ನು ತುಂಬಿ ಕೊಡಬೇಕಾಗುತ್ತದೆ. ಬೀದರ್ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡ ತಕ್ಕಂಥ ಜನರೂ ಕೂಡ ಈ ಆಕ್ಸಿಡೆಂಟ್‌ಗೆ ತುತ್ತಾಗಿದ್ದಾರೆ. ಶ್ರೀಮಾನ್ ಭೀಮಣ್ಣ ಖಂಡ್ರೆಯವರಿಗೂ ಕೂಡ ಇದು ಗೊತ್ತಿರುವ ವಿಷಯವಾಗಿರುತ್ತದೆ. ಫ್ಯಾಕ್ಟರಿಯವರೂ ಕೂಡ ಆಸ್ಪತ್ರೆಯಲ್ಲಿ ಇದ್ದುದನ್ನು ಅವರು ನೋಡಿರಬಹುದು. ಫ್ಯಾಕ್ಟರಿಯವರನ್ನು ತುಂಬಿಕೊಂಡು ಹೋದರು, ಆಕ್ಸಿಡೆಂಟ್ ಆಯಿತು, ಫ್ಯಾಕ್ಟರಿಯವರಾದುದರಿಂದ ಅವರಿಗೆ ಕಾಂಪೆನ್‌ಸೇಷನ್ ಕೊಡುತ್ತಾರೆ, ಅದು ಬೇರೆ ವಿಷಯ. ಈ ಕಾರ್ಮಿಕ ಕ್ರಮಕೋಸ್ಕರ ಕಾನೂನಿಗೆ ವಿರುದ್ಧವಾಗಿ ಜನರನ್ನು ತುಂಬಿಕೊಂಡು ಹೋಗಿದ್ದಾರೆ. ಆದ್ದರಿಂದ ಅಲ್ಲಿ ಪೋಲೀಸ್‌ನವರು ಕೇಸ್ ಹಾಕಿರುತ್ತಾರೆ. ಸರ್ಕಾರದಿಂದ ಇದಕ್ಕಾಗಿ ಸಹಾಯ ಮಾಡಿದ್ದೂ ಬಹಳ

ಸಂತೋಷವಾದ ವಿಚಾರ. ಆದರೆ ಸತ್ತು ಹೋದವರು, ಕೈಕಾಲು ಮುರಿದುಕೊಂಡವರು, ಕೆಲಸವನ್ನೇ ಮಾಡುವುದಕ್ಕೆ ಸಾಧ್ಯವಾಗದೆ ಇರತಕ್ಕಂಥ ಜನರು ಇರುತ್ತಾರಲ್ಲ, ಅವರಿಗೆ ಜೀವನವಿಡೀ ಸರ್ಕಾರ ಸಹಾಯವನ್ನು ಕೊಡುತ್ತದೆಯೇ ? ಆದ್ದರಿಂದ ಯಾರು ಇದಕ್ಕೆ ಕಾರಣರಾಗಿರುತ್ತಾರೋ ಲಾರಿ ಮಾಲೀಕರೋ ಅಥವಾ ಪಿಡಬ್ಲ್ಯೂಡಿಯವರೋ ಇದನ್ನು ದಯವಿಟ್ಟು ಕಂಡುಹಿಡಿಯಬೇಕೆಂದು ಹೇಳುತ್ತೇನೆ. The Government may give some money. That is alright and I am not saying that the Government should give more amount. It is left to the discretion of the Government. ಆದರೆ ಕೂಲಿ ಮಾಡಿಕೊಂಡಿರತಕ್ಕಂಥ ಜನ ಜೀವನವನ್ನೇ ಮಾಡುವುದಕ್ಕೆ ಸಾಧ್ಯವಿಲ್ಲದಂಥ ಜನ ಅವರಿಗೆ ಮೂರೂ ಸಾವಿರ ರೂಪಾಯಿಗಳನ್ನು ಕೊಟ್ಟು ಬಿಟ್ಟರೆ ಅವರಿಗೆ ನಿಜವಾದ ಪರಿಹಾರವನ್ನು ಕೊಟ್ಟಂತಾಗುವುದಿಲ್ಲ. ಅವರಿಗೆ ನಿಜವಾದ ಪರಿಹಾರ ದೊರಕಿಸಬೇಕಾದರೆ ಅವರನ್ನು ಯಾರು ಕರೆದುಕೊಂಡು ಹೋದರೋ ಅವರನ್ನೇ ಜವಾಬ್ದಾರರನ್ನಾಗಿ ಮಾಡಬೇಕು. ಅವರಿಂದ ಕಾಂಪೆನ್‌ಸೇಷನ್ ಕೊಡುವಂಥ ಒಂದು ವ್ಯವಸಯನ್ನು ಮಾಡಬೇಕು. ಈ ವಿಷಯದಲ್ಲಿ ಸರ್ಕಾರದವರು ದೀರ್ಘವಾಗಿ ಯೋಚನೆ ಮಾಡಬೇಕು. ಇದರಲ್ಲಿ ಒಂದು ವಿಷಯ ಇದೆ ಶ್ರೀಮಾನ್ ಭೀಮಣ್ಣ ಖಂಡ್ರೆಯವರು ಬಾಲ್ಕಿಯವರು ಅವರು ಇದನ್ನು ಏರ್ಪಾಡು ಮಾಡಿದವರು, ಮುಖ್ಯಮಂತ್ರಿಗಳು ಹೇಳುವುದೇನೆಂದರೆ ಫ್ಯಾಕ್ಟರಿಯವರು ಯಾರೋ ಮಾಡಿದವರು ಎಂದು, ಅದು ಯಾರೇ ಮಾಡಿರಲಿ ಫ್ಯಾಕ್ಟರಿಯವರೇ ಮಾಡಿರಲಿ ಯಾರೇ ಮಾಡಿರಲಿ ಅದು ಮುಖ್ಯವಲ್ಲ ಫ್ಯಾಕ್ಟರಿಯವರಿಗೆ ಕೊಂದರೆಯಾಗಿದ್ದರೆ ಅದು ಅವರ ಜವಾಬ್ದಾರಿ. ಆದರೆ ಇದ್ದನ್ನೆಲ್ಲ ಯಾರು ಏರ್ಪಾಡು ಮಾಡಿರುತ್ತಾರೋ ಅವರಿಂದ ಈ ಅಪಘಾತಕ್ಕೆ ಒಳಗಾದವರಿಗೆ ಸಾಕಷ್ಟು ಪರಿಹಾರ ಧನ ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಯಾರು ಗಾಯಗೊಂಡು ಮುಂದೆ ಕೆಲಸ ಕಾರ್ಯಗಳನ್ನ ಮಾಡುವುದಕ್ಕೆ ಸ್ವಂತ ಜೀವನವನ್ನು ಮಾಡುವುದಕ್ಕೆ ನಿಶಕ್ತರಾಗಿದ್ದಾರೆ ಅಂಥವರಿಗೆ ಸರ್ಕಾರ ಮಾನವೀಯತೆಯ ದೃಷ್ಟಿಯಿಂದ ನೋಡತಕ್ಕದ್ದು ಯುಕ್ತ. ಆ ರೀತಿ ಮಾಡತಕ್ಕದ್ದು ಸೂಕ್ತ.

ಶ್ರೀ ಆರ್. ಗುಂಡೂರಾವ್.—ಮಾನ್ಯ ವಿರೋಧಪಕ್ಷದ ನಾಯಕರು ಈ ಅಪಘಾತದ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೆ. ನಾನು ಅದಕ್ಕೆ ಸಂಬಂಧಪಟ್ಟ ವರದಿಯನ್ನು ಸದನದ ಮುಂದೆ ಇಟ್ಟಿದ್ದೇನೆ. ಮತ್ತೆ ನಮ್ಮ ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ ಡ್ರೈವರ್ಸ್ ಮೇಲೆ ಕೇಸನ್ನು ಹಾಕಿ ತಮ್ಮ ಕ್ರಮವನ್ನು ಕೈಗೊಳ್ಳಲಾಗಿದೆ. ನಾನೂ ಆಗ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದೇನೆ ಕೆಲವರಿಗೆ ಸೀರಿಯಸ್ ಇಂಜುರೀಸ್ ಆಗಿರುವುದು ನಿಜ. ಪರಿಹಾರವನ್ನು ಏನು ಕೊಡಬೇಕಾಗಿತ್ತೋ ಅದನ್ನು ಈಗಾಗಲೇ ಕೊಟ್ಟಿದ್ದೇವೆ. ಯಾರು ಇದನ್ನು ಆರ್ಗನೈಜ್ ಮಾಡಿದ್ದರೋ ಅವರು ಏನು ಕೊಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೋ ಅದು ನಮ್ಮ ಕಾನೂನಿನಲ್ಲಿ ಬರುವುದಿಲ್ಲ. ಸಂಬಂಧಪಟ್ಟ ವಾಹನ ಚಾಲಕ ಹತ್ತಿರ ಲೈಸೆನ್ಸ್ ಇಲ್ಲದ ಪ್ರಯುಕ್ತ ಕ್ರಮವನ್ನು ಕೈಗೊಳ್ಳಲಾಗಿದೆ. ಅಪಘಾತಕ್ಕೆ ಈಡಾಗಿರುವವರಿಗೆ ಏನು ಸಹಾಯವನ್ನು ಒದಗಿಸಬೇಕೋ ಅದನ್ನು ಒದಗಿಸಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಸಂಬಂಧಪಟ್ಟ ಕಂಟ್ರಾಕ್ಟರುದಾರರು ಏನು ಕೊಡಬೇಕೆಂದು ಹೇಳಿದ್ದಾರೆ ಆ ಬಗ್ಗೆ ಸರ್ಕಾರ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಮುಖ್ಯಮಂತ್ರಿಗಳು ಆರ್ಗನೈಜ್ ಮಾಡಿದಂತಹವರು ಪರಿಹಾರವನ್ನು ಕೊಡುವುದಕ್ಕೆ ಕಾನೂನು ಇಲ್ಲಾ ಎಂದು ಹೇಳುತ್ತಿದ್ದಾರೆ. ನಾನು ಹೇಳುವುದನು ಅವರು ಸ್ವಲ್ಪ ಆಳವಾಗಿ ನೋಡಬೇಕಾಗುತ್ತದೆ. ಕಾನೂನು ಪ್ರಕಾರ ನನ್ನ ದೃಷ್ಟಿಯಲ್ಲಿ ಡಿಸ್ಪ್ಯೂಟ್ ಮ್ಯಾಜಿಸ್ಟ್ರೇಟ್ ಬಹುಶಃ ಕಾಂಪನ್‌ಸೇಷನ್ ಕೊಡುವುದಕ್ಕೆ ಸಾಧ್ಯ ಇದೆ ಎಂದು ತಿಳಿದುಕೊಂಡಿದ್ದೇನೆ. ಇದನ್ನು ನಿಮ್ಮ ಕಾನೂನು ಇಲಾಖೆಯ ಮುಖಾಂತರ ಎಕ್ಸಾಮಿನ್ ಮಾಡಿಸಿ ನೋಡಿ. ಇದನ್ನು ದಯ ಮಾಡಿ ನೋಡಿ. ಆನಂತರ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಸರ್ಕಾರಕ್ಕೆ ಗೊತ್ತಾದಾಗ ನಾವು ಒಪ್ಪಿಕೊಳ್ಳೋಣ. ಮಾನ್ಯ ಮುಖ್ಯಮಂತ್ರಿಗಳು ಲಾರಿಗಳಲ್ಲಿ ಜನರನ್ನು ಕರೆದುಕೊಂಡು ಬನ್ನಿ ಎಂದು ಹೇಳಿರುವುದಿಲ್ಲ. ಈ ಬಗ್ಗೆ ಯಾರು ತಪ್ಪಿತಸ್ಥರು ಇದ್ದಾರೆ, ಅವರ ಬಗ್ಗೆ ಯಾವುದೇ ದಾಕ್ಷಿಣ್ಯವನ್ನು ಇಟ್ಟುಕೊಳ್ಳಬೇಡಿ. ಏನೋ ಪಾಪ ಆತುರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಕೋಶಿಸ್ ಗಳಿಸುವುದ ಕ್ಕಾಗಿ ಈ ರೀತಿ ಲಾರಿಗಳಲ್ಲಿ ಜನರು ತುಂಬಿಕೊಂಡು ಬಂದಿರಬಹುದು. ಮಾನ್ಯ ಮುಖ್ಯಮಂತ್ರಿಗಳು ಲಾರಿಗಳಲ್ಲಿ ಜನರನ್ನು ಕರೆದುಕೊಂಡು ಬನ್ನಿ ಎಂದು ಹೇಳಿದ್ದಾರೆಂದೇನೂ ನಾನು ಹೇಳುತ್ತಾ ಇಲ್ಲ.